# ಕಾಮಿಡಿ ಕನವರಿಕೆಯಲ್ಲಿ ಅರ್ಚನಾ



**ಕನ್ನಡದ ಹಲವು ಸಿನಿಮಾಗಳಲ್ಲಿ ಅಭಿನಯಿಸಿರುವ ಅರ್ಚನಾ ಕೊಟ್ಟಿಗೆ ಅವರಿಗೆ ಕಾಮಿಡಿ ಪಾತ್ರಗಳಲ್ಲಿ ತಮ್ಮನ್ನು ಪ್ರಯೋಗಿಸಿಕೊಳ್ಳಬೇಕೆಂಬ ಹಂಬಲ. ಈಚೆಗೆ 'ಹಾಸ್ಟೆಲ್ ಹುಡುಗರು ಬೇಕಾಗಿದ್ದಾರೆ' ಸಿನಿಮಾದಲ್ಲಿ ಕಾಣಿಸಿಕೊಂಡಿರುವ ಅವರ ಮುಂದೆ ಮತ್ತಷ್ಟು ಸಿನಿಮಾಗಳು ಸರದಿಯಲ್ಲಿವೆ.**

'ಸಿನಿಮಾದಲ್ಲಿ ಹುಡುಗಿಯರು ಗ್ಲಾಮರಸ್ ಆಗಿ ಕಾಣಿಸಬೇಕೆಂದು ಬಯಸುತ್ತಾರೆ. ತೆರೆ ಮೇಲೆ ತುಂಬಾ ಸುಂದರವಾಗಿ ಕಾಣಬೇಕು, ಬಬ್ಲಿ ಬಬ್ಲಿ ಆಗಿರಬೇಕು, ಚೆನ್ನಾಗಿ ಡಾನ್ಸ್ ಮಾಡಬೇಕು ಹೀಗೆ... ಆದರೆ ಇವೆಲ್ಲದರ ಹೊರತಾಗಿಯೂ ನಾನು ನಟನೆಯಿಂದಲೇ ಗುರುತಿಸಿಕೊಳ್ಳಬೇಕು, ಸಾದಾಸೀದಾ ಹುಡುಗಿಯಾಗಿಯೇ ಜನರಿಗೆ ಇಷ್ಟವಾಗಬೇಕು...'

ಈಚೆಗೆ 'ಹಾಸ್ಟೆಲ್ ಹುಡುಗರು ಬೇಕಾಗಿದ್ದಾರೆ' ಸಿನಿಮಾದಲ್ಲಿ ಕಾಣಿಸಿಕೊಂಡಿರುವ ನಟಿ ಅರ್ಚನಾ ಕೊಟ್ಟಿಗೆ ಅವರ ಈ ಅಭಿಲಾಷೆಗೆ ಒತ್ತಾಸೆಯಾಗಿ ಮತ್ತಷ್ಟು ಸಿನಿಮಾಗಳು ಅವರ ಕೈಯಲ್ಲಿವೆ. ಹಲವು ಚಿತ್ರಗಳಲ್ಲಿ ನಟಿಸುತ್ತಿರುವ ಅವರು, ಸದ್ಯ ಮಲೆಯಾಳಂ ಸಿನಿಮಾದಲ್ಲಿಯೂ ಕಾಣಿಸಿಕೊಳ್ಳುತ್ತಿದ್ದಾರೆ.

ಬೆಂಗಳೂರಿನ ಹುಡುಗಿ ಅರ್ಚನಾ ಕೊಟ್ಟಿಗೆ ಅವರಿಗೆ, ಬಿ.ಕಾಂ. ಓದುವಾಗ ಜಾಹೀರಾತೊಂದರಲ್ಲಿ ನಟಿಸುವ ಅವಕಾಶ ಅಚಾನಕ್ಕಾಗಿ ದೊರೆಯಿತು. ಪಾಕೆಟ್ ಮನಿಗೆಂದು ನಟಿಸಲು ಹೋದ ಅವರಿಗೆ ಒಂದಾದ ಮೇಲೊಂದರಂತೆ ಜಾಹೀರಾತುಗಳು ದೊರೆತವು. ಹಾಗೆ ಜಾಹೀರಾತಿನ ಜಾಡಿನಿಂದಲೇ ಸಿನಿಮಾ ಹಾದಿ ತುಳಿದವರು ಅರ್ಚನಾ.

'ಅರಣ್ಯಕಾಂಡ' ಎಂಬ ಸಿನಿಮಾ ಮೂಲಕ ಚಿತ್ರರಂಗಕ್ಕೆ ಕಾಲಿಟ್ಟ ಅವರು ನಂತರ 'ಡಿಯರ್ ಸತ್ಯ', 'ಕಟಿಂಗ್ ಶಾಪ್', 'ಯೆಲ್ಲೋ ಗ್ಯಾಂಗ್ಸ್', 'ಮೇಡ್ ಇನ್ ಬೆಂಗಳೂರು'... ಹೀಗೆ ಹಲವು ಸಿನಿಮಾಗಳಲ್ಲಿ ಕಾಣಿಸಿಕೊಂಡರು. ಈಚೆಗೆ 'ಹೊಂದಿಸಿ ಬರೆಯಿರಿ', 'ಹಾಸ್ಟೆಲ್ ಹುಡುಗರು ಬೇಕಾಗಿದ್ದಾರೆ' ಸಿನಿಮಾದಲ್ಲಿ ಗಮನಾರ್ಹ ಪಾತ್ರ ಮಾಡಿದ್ದಾರೆ. ಇಂಥ ಇನ್ನಷ್ಟು ಪಾತ್ರಗಳು ತಮ್ಮದಾಗಬೇಕು ಎಂಬ ತುಡಿತ ಅವರದ್ದು. ಅದರಲ್ಲೂ ಕಾಮಿಡಿ ಪಾತ್ರಗಳಲ್ಲಿ ನಟನೆಯ ಪ್ರಯೋಗಶೀಲತೆ ತೋರಬೇಕೆಂಬುದು ಅವರ ಆದ್ಯತೆಯ ಮೊದಲ ಪಟ್ಟಿಯಲ್ಲಿದೆ.

'ನನಗೆ ಕಾಮಿಡಿ ತುಂಬಾ ಇಷ್ಟ. ನಟಿ ಊರ್ವಶಿ ಅವರಂತೆ ಕಾಮಿಡಿ ಪಾತ್ರಗಳಲ್ಲಿ ಕಾಣಿಸಿಕೊಳ್ಳಬೇಕು ಎಂದಾಸೆ. ಆದರೆ ಹೆಣ್ಣು ಮಕ್ಕಳಿಗೆ ಕಾಮಿಡಿ ಪಾತ್ರ ಸೃಷ್ಟಿಯೇ ಕಡಿಮೆಯಿದೆ. ಹಾಗೆ ಸೃಷ್ಟಿಯಾದರೆ, ಆ ಅವಕಾಶ ನನ್ನದಾಗಬೇಕೆಂಬ ನಿರೀಕ್ಷೆ ಬಹಳ ಇದೆ. ಜೊತೆಗೆ, ಹಲವು ರೀತಿಯ ಪಾತ್ರಗಳನ್ನು ಮಾಡಬೇಕಿದೆ' ಎನ್ನುತ್ತಾರೆ.

ಸಿನಿಮಾರಂಗದ ಯಾವುದೇ ಹಿನ್ನೆಲೆಯಿಲ್ಲದೆ ಬಂದಿದ್ದ ಅರ್ಚನಾ ಅವರಿಗೆ ನೆರವಾಗಿದ್ದು ನಾಟಕವೊಂದರಲ್ಲಿ ಅಭಿನಯಿಸಿದ ಅನುಭವ. 'ಅನಾಮಿಕ' ರಂಗತಂಡದೊಂದಿಗೆ 'ನೀನ್ ನಾನಾದ್ರೆ, ನಾನ್ ನೀನೇನಾ' ನಾಟಕದಲ್ಲಿ ತೊಡಗಿಕೊಂಡಿದ್ದು ನಟನೆಯ ಆಳವನ್ನು ಅವರಿಗೆ ಪರಿಚಯಿಸಿತ್ತು. ಕಲೆಯೆಡೆಗೆ ಶಿಸ್ತು, ಭಾಷೆ, ಡೈಲಾಗ್ ನಿರ್ವಹಣೆ ಸೇರಿದಂತೆ ಹಲವು ವಿಷಯಗಳನ್ನು ನಾಟಕ ತಮಗೆ ಕಲಿಸಿದ್ದಾಗಿ ಹೇಳುತ್ತಾರೆ. ಮುಂದೆ ಅವಕಾಶ ದೊರೆತರೆ ನಾಟಕಗಳಲ್ಲಿ ಅಭಿನಯಿಸುವುದಾಗಿಯೂ ಹೇಳುತ್ತಾರೆ.

'ಆರಂಭದಲ್ಲಿ ಸಿನಿಮಾಗಳನ್ನು ಹೇಗೆ ಆಯ್ಕೆ ಮಾಡಿಕೊಳ್ಳಬೇಕು ಎಂಬುದೇ ಗೊತ್ತಿರಲಿಲ್ಲ. ಆಮೇಲೆ ಸಿನಿಮಾವನ್ನು ಗಂಭೀರವಾಗಿ ತೆಗೆದುಕೊಂಡೆ. ಸಿನಿಮಾರಂಗಕ್ಕೆ ಬಂದ ಈ ಐದು ವರ್ಷಗಳಲ್ಲಿ ಸಿನಿಮಾ ಕಲೆಯ ಮೇಲೆ ಗೌರವ ಜಾಸ್ತಿಯಾಗಿದೆ. ಜವಾಬ್ದಾರಿಯೂ ಹೆಚ್ಚಾಗಿದೆ' ಎನ್ನುತ್ತಾರೆ.

ಅರ್ಚನಾ ಅಭಿನಯದ 'ಬಯಲುಸೀಮೆ' ಚಿತ್ರ ಶೀಘ್ರದಲ್ಲಿ ಬಿಡುಗಡೆಯಾಗಲಿದೆ. 'ಹಾಸ್ಟೆಲ್ ಹುಡುಗರು ಬೇಕಾಗಿದ್ದಾರೆ' ಸಿನಿಮಾದ ತೆಲುಗು ಅವತರಣಿಕೆ ಕೂಡ ಬಿಡುಗಡೆ ಆಗುತ್ತಿದೆ. 'ಎಲ್ಲ ಕಾಲೆಳೆಯುತ್ತೆ ಕಾಲ', 'ಜುಗಲ್‌ಬಂದಿ' ಸಿನಿಮಾಗಳು ಕೂಡ ತೆರೆಗೆ ಸಿದ್ಧವಾಗಿವೆ. 'ಶೇಷ' ಎಂಬ ದ್ವಿಭಾಷಾ ಚಿತ್ರದಲ್ಲಿಯೂ ಅರ್ಚನಾ ನಟಿಸಿದ್ದು, ಮತ್ತೊಂದು ಸಿನಿಮಾ ಚಿತ್ರೀಕರಣದಲ್ಲಿ ಬ್ಯುಸಿಯಾಗಿದ್ದಾರೆ. 'ಪಾತ್ರ ಯಾವುದಾದರೂ ಸರಿ, ಪೂರ್ಣಪ್ರಮಾಣದ ಪ್ರಯತ್ನವಂತೂ ನನ್ನ ಕಡೆಯಿಂದ ಇದ್ದೇ ಇರುತ್ತದೆ' ಎಂಬ ಆತ್ಮವಿಶ್ವಾಸದ ಮಾತು ಅರ್ಚನಾ ಅವರದ್ದು. ■